**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182-246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/102/2015-16/6503 **ದಿನಾಂಕ: 16.12.2015**

**–:*ಸಾರಿಗೆ ವಾಹನಗಳನ್ನು ಒಂದು ವರ್ಷಧ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ* :–**

**:–:ಅಲ್ಪಾವಧಿ ಟೆಂಡರ್ ಪ್ರಕಟಣೆ:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಹಾಲು ಶೇಖರಣೆ ಮಾಡಲು ವಿವಿಧ ಸಾಮರ್ಥ್ಯದ ವಾಹನಗಳನ್ನು, ಗೂಡ್ಸ್ ಆಟೋ/ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್/2.5 ಟನ್ ಸಾಮರ್ಥ್ಯದ ಸಾಗಾಣಿಕೆ ವಾಹನಗಳನ್ನು, ಮತ್ತು ಕಚೇರಿ ಕೆಲಸ ಕಾರ್ಯಗಳಿಗಾಗಿ/ಪಶುವೈದ್ಯಕೀಯ ಮಾರ್ಗಗಳಿಗಾಗಿ ಟಾಟಾ ಇಂಡಿಕಾ/ಇಂಡಿಗೋ ಕಾರುಗಳನ್ನು ಒದಗಿಸಲು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 21.12.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ-ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | **ದಿನಾಂಕ: 14.01.2016 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **ದಿನಾಂಕ: 16.01.2016 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **ದಿನಾಂಕ: 18.01.2016 ರಂದು ಬೆಳಿಗ್ಗೆ: 11.30 ಗಂಟೆಗೆ** |

**I.** **ಈ ಕೆಳಗೆ ನಮೂದಿಸಿದ ಹಾಲು ಶೇಖರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ ಸುಸ್ಥಿತಿಯಲ್ಲಿರುವ 2005 ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ವಾಹನ ಒದಗಿಸಲು 01 ವರ್ಷದ ಅವಧಿಗೆ ಅಥವಾ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಗುತ್ತಿಗೆ ಕರೆಯಲಾಗಿದೆ :– SMU/P&I/TENDER/2015-16/12/001**

| ಮಾರ್ಗದ ಸಂಖ್ಯೆ | ಹಾಲು ಶೇಖರಣಾ ಮಾರ್ಗದ ಹೆಸರು | ವಾಹನ ಸಾಮರ್ಥ್ಯ ಟನ್‌ಗಳಲ್ಲಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ವೀರಮದಕರಿ ಬಿ.ಜಿ.ಕೆರೆ ಶೀ.ಕೇಂದ್ರ(ಚಿಕ್ಕೋಬನಹಳ್ಳಿ, ಮುಸ್ಟಲಗುಮ್ಮಿ, ಅಬ್ಬೇನಹಳ್ಳಿ, ಮಲ್ಲೂರಹಟ್ಟಿ, ಬಿ.ಜಿ.ಕೆರೆ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 180 ಕಿ.ಮೀ. | 25,000/- | 30,000/- |
| 2 | ಹೊಂಬಾಳೆ ಷಟಲ್(ಗ್ಯಾರೇಹಳ್ಳಿ, ಅಂದನೂರು,ಹೆಚ್.ಮಲ್ಲೇನಹಳ್ಳಿ) | ಗೂಡ್ಸ್ ಆಟೋ | 44 ಕಿ.ಮೀ. | 10,000/- | 15,000/- |
| 3 | ದವಳಗಿರಿ ಚಿತ್ರದುರ್ಗ ಶೀಕೇಂದ್ರ( ಚಿಕ್ಕಕಬ್ಬಿಗೆರೆ, ಬೇಡರಶಿವನಕೆರೆ, ಚಿಕ್ಕಬೆನ್ನೂರು ಬಿ.ಎಂ.ಸಿ. ಚಿತ್ರದುರ್ಗ ಶೀಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 120 ಕಿ.ಮೀ | 25,000/- | 30,000/- |
| 4 | ಪರಶುರಾಮಪುರ-2 ಚಳ್ಳಕೆರೆ ಶೀ.ಕೇಂದ್ರ(ಚಿಕ್ಕಮಧುರೆ, ಬಾಲೇನಹಳ್ಳಿ, ಕುರುಡಿಹಳ್ಳಿ ಡೈರಿ ಫಾರಂ, ಸೋಮಗುದ್ದು, ಚಳ್ಳಕೆರೆ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 86 ಕಿ.ಮೀ | 25,000/- | 30,000/- |
| 5 | ಕಲ್ಪತರು -2 ಹೊಸದುರ್ಗ ಶೀಕೇಂದ್ರ(ಬಂಡೇಗೌಡನಪಾಳ್ಯ, ಹಾರ್ಲಹಳ್ಳಿ, ಕೆಲ್ಲೋಡು, ಹೊಸದುರ್ಗ ಶೀಕೇಂದ್ರ) | 2.5 ಟನ್ | 104 ಕಿ.ಮೀ | 30,000/- | 40,000/- |
| 6 | ಉಕ್ಕಡಗಾತ್ರಿ ದಾವಣಗೆರೆ ಡೈರಿ( ಕಡ್ಲೆಗೊಂದಿ, ಸಲಗನಹಳ್ಳಿ, ಸಾಲಕಟ್ಟೆ, ಕೆ.ಬೇವಿನಹಳ್ಳಿ, ಬನ್ನಿಕೊಡು ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 80 ಕಿ.ಮೀ | 25,000/- | 30,000/- |
| 7 | ಉಕ್ಕಡಗಾತ್ರಿ-2 ದಾವಣಗೆರೆ ಡೈರಿ( ಲಕ್ಕಶೆಟ್ಟಿಹಳ್ಳಿ, ಯಲವಟ್ಟಿ, ಕಮಲಪುರ ಹನಗವಾಡಿ, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 120 ಕಿ.ಮೀ | 25,000/- | 30,000/- |
| 8 | ನಂದಿಗುಡಿ-2 ದಾವಣಗೆರೆ ಡೈರಿ ( ನಂದಿತಾವರೆ, ಕುಂಬಳೂರು, ಬಿ.ಆರ್. ಕ್ಯಾಂಪ್, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 100 ಕಿ.ಮೀ | 25,000/- | 30,000/- |
| 9 | ತಗ್ಗಿನಮಠ ದಾವಣಗೆರೆ ಡೈರಿ ( ಮುತ್ತಿಗೆ, ಮತ್ತಿಹಳ್ಳಿ, ನಾಗರಕೊಂಡ, ಕಡಬಗೆರೆ, ಹಿಕ್ಕಂಗೆರೆ, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 328 ಕಿ.ಮೀ | 25,000/- | 30,000/- |
| 10 | ತಗ್ಗಿನಮಠ-2 ದಾವಣಗೆರೆ ಡೈರಿ ( ಬಳಿಗನೂರು, ನಜೀರ್‌ನಗರ, ಉಂಬಳಗಟ್ಟೆ, ಅಡವಿಹಳ್ಳಿ, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 115 ಕಿ.ಮೀ | 25,000/- | 30,000/- |
| 11 | ಹುಚ್ಚಂಗಿ ದುರ್ಗ -2 ದಾವಣಗೆರೆ ಡೈರಿ( ಶಿಂಗ್ರಿಹಳ್ಳಿ, ಎಂ.ಕೆ.ಕ್ಯಾಂಪ್, ಹೊಸಕಂಡ್ಲೆಬಾಳು, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 102 ಕಿ.ಮೀ | 25,000/- | 30,000/- |

| | | | | | |
|---|---|---|---|---|---|
| 12 | ಶಾಂತಿಸಾಗರ–2 ದಾವಣಗೆರೆ ಡೈರಿ ( ಲೋಕಿಕೆರೆ, ತುರ್ಚಘಟ್ಟ, ನಾಗನೂರು, ಹೊಸಕುಂದುವಾಡ ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 130 ಕಿ.ಮೀ | 25,000/– | 30,000/– |
| 13 | **ಸಿರಿಯಾಳ ತಡಗಣಿ ಶೀ.ಕೇಂದ್ರ ಮಾರ್ಗ (ಗಿಣಿವಾಲ, ಗಂಗವಳ್ಳಿ, ಕೊಳಗಿ, ಕೌಲಿ, ತಡಗಣಿ ಶೀ.ಕೇಂದ್ರ)** | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 122 ಕಿ.ಮೀ. | 25,000/– | 30,000/– |
| 14 | ಅಘೋರೇಶ್ವರ–2 ಆನಂದಪುರ ಶೀ.ಕೇಂದ್ರ ( ನಂದಿತಳೆ, ಉಳ್ಳೂರು, ನೀಚಡಿ, ಆನಂದಪುರ ಸಿ.ಸಿ.) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 125 ಕಿ.ಮೀ | 25,000/– | 30,000/– |
| 15 | ತಾವರೆಕೆರೆ –1 ಶಿವಮೊಗ್ಗ ಡೈರಿ ( ಗಂಗೂರು, ಬಂಡಿಗುಡ್ಡ, ದೊಡ್ಡೇರಿ, ಬೆಳ್ಳಿಗೆರೆ, ಶಿವಮೊಗ್ಗ ಡೈರಿ **ಬೆಳಿಗ್ಗೆ ಸರತಿ ಮಾತ್ರ)** | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 65 ಕಿ.ಮೀ. | 25,000/– | 30,000/– |
| 16 | ಮದಗ–2 ತಡಗಣಿ ಶೀಕೇಂದ್ರ(ಭದ್ರಾಪುರ, ನಂದಿಹಳ್ಳಿ, ಕಣಿವೆಮನೆ, ಉಡುಗಣಿ, ತಡಗಣಿ ಶೀಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 102 ಕಿ.ಮೀ. | 25,000/– | 30,000/– |
| 17 | ಭದ್ರಾ–1 ಶಿವಮೊಗ್ಗ ಡೈರಿ (ಉಜ್ಜನಿಪುರ, ದೊಡ್ಡಗೋಪೇನಹಳ್ಳಿ, ತಿಮ್ಲಾಪುರ, ಶಿವಮೊಗ್ಗ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 46 ಕಿ.ಮೀ. | 25,000/– | 30,000/– |

**II. ಈ ಕೆಳಕಂಡ ಕಚೇರಿ ಕೆಲಸ /ಸಂಚಾರಿ ಪಶುವೈದ್ಯಕೀಯ ಮಾರ್ಗಗಳಿಗೆ 2008 ರ ಅಥವಾ ನಂತರದ ಸಾಲಿನ ಮಾದರಿಯ ಹಳದಿ ಬೋರ್ಡ್ ಹೊಂದಿರುವ ಟಾಟಾ ಇಂಡಿಕಾ ಕಾರುಗಳನ್ನು ಒದಗಿಸಲು ಗುತ್ತಿಗೆ ಕರೆಯಲಾಗಿದೆ. ಪ್ರತಿ ಕಿ.ಮೀಗೆ ದರ ನಮೂದಿಸುವುದು. ಗುತ್ತಿಗೆ ಅವಧಿ–01 ವರ್ಷ ಅಥವಾ ಪಶುವೈದ್ಯಕೀಯ ಮಾರ್ಗಗಳಿಗೆ ಪಶುವೈದ್ಯರು ಲಭ್ಯವಿರುವರೆಗೆ ಅಥವಾ ಒಕ್ಕೂಟದ ಅವಶ್ಯಕತೆ ಇರುವವರೆಗೆ ಮಾತ್ರ ವಾಹನ ಉಪಯೋಗಿಸಲಾಗುವುದು.SMU/P&I/TENDER/2015-16/12/002**

| ಮಾರ್ಗದ ಸಂಖ್ಯೆ | ಎಂ.ವಿ.ಆರ್/ಕ್ಷೇತ್ರ ಮಾರ್ಗದ ಹೆಸರು | ವಾಹನ ಮಾದರಿ | ಮಾಸಿಕ ಅಂದಾಜು ಅಂತರ | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 18 | ವ್ಯವಸ್ಥಾಪಕರು (ಶೇ) ಶಿವಮೊಗ್ಗ, ಮಾರ್ಗ ಶಿವಮೊಗ್ಗ | ಟಾಟಾ ಇಂಡಿಗೋ ಇ.ಸಿ.ಎಸ್./ವಿಸ್ತಾ | 3000 ಕಿ.ಮೀ | 15,000/– | 20,000/– |
| 19 | ಶಿವಮೊಗ್ಗ ಎಂ.ವಿ.ಆರ್. –1 ಮಾರ್ಗ ಶಿವಮೊಗ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 20 | ಶಿವಮೊಗ್ಗ ಎಂ.ವಿ.ಆರ್.–2 ಮಾರ್ಗ ಶಿವಮೊಗ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 21 | ಚಿತ್ರದುರ್ಗ ಎಂ.ವಿ.ಆರ್. ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 22 | ಉಪ ವ್ಯವಸ್ಥಾಪಕರು ಚಿತ್ರದುರ್ಗ (ಶೇ) ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 23 | ಸಾಗರ ಎಂ.ವಿ.ಆರ್. ಮಾರ್ಗ– ಸಾಗರ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 24 | ಉಪ ವ್ಯವಸ್ಥಾಪಕರು (ಶೇ) ಶಿಕಾರಿಪುರ ವಿಭಾಗ, ಶಿಕಾರಿಪುರ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 25 | ಹರಪನಹಳ್ಳಿ ಎಂ.ವಿ.ಆರ್ ಮಾರ್ಗ ಹರಪನಹಳ್ಳಿ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 26 | ಸ್ಟೆಪ್ ವಿಭಾಗ/ಕಚೇರಿ ಕೆಲಸದ ಮಾರ್ಗ ಶಿವಮೊಗ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/– | 20,000/– |
| 27 | ಹುಲ್ಲಿನ ಬೀಜ/ಪಶುಮೇವು ಸರಬರಾಜು ವಾಹನ : **ದಾವಣಗೆರೆ** ಡೈರಿಯಿಂದ ಹುಲ್ಲಿನಬೀಜ/ಉಗ್ರಾಣ ಸಾಮಾಗ್ರಿಗಳನ್ನು ಅವಶ್ಯಕತೆ ಇದ್ದಾಗ ಮಾತ್ರ ಬಿ.ಎಂ.ಸಿ/ಸಂಘಗಳಿಗೆ ಸಾಗಾಣಿಕೆ ಮಾಡುವುದು. | 1.5 ಟನ್ | 1000 ಕಿ.ಮೀ | 15,000/– | 20,000/– |
| 28 | ಹುಲ್ಲಿನ ಬೀಜ/ಪಶುಮೇವು ಸರಬರಾಜು ವಾಹನ **ಚಿತ್ರದುರ್ಗ** ಸಿ.ಸಿ.ಹುಲ್ಲಿನಬೀಜ/ಉಗ್ರಾಣ ಸಾಮಾಗ್ರಿಗಳನ್ನು ಅವಶ್ಯಕತೆ ಇದ್ದಾಗ ಬಿ.ಎಂ.ಸಿ/ಸಂಘಗಳಿಗೆ ಸಾಗಾಣಿಕೆ ಮಾಡುವುದು. | 1.5 ಟನ್ | 1000 ಕಿ.ಮೀ | 15,000/– | 20,000/– |

## ನಿಬಂಧನೆ ಮತ್ತು ಷರತ್ತುಗಳು

1. **ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೊಲು ಹಾಕಿಕೊಳ್ಳಲಾಗುವುದು.**
2. **ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**

3. **ಕನಿಷ್ಠ ಇ.ಎಂ.ಡಿ. ರೂ. 15,000/– ಆದರೆ ಶೇಖರಣೆ ಮಾರ್ಗದ ವಾಹನಗಳಿಗೆ, ಟಾಟಾ ಏಸ್ / ಮ್ಯಾಕ್ಸ್ ಪಿಕ್‌ಅಪ್ ವಾಹನಗಳಿಗೆ/ ಕಾರುಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ ವಾಹನಕ್ಕೆ ಹಾಗೂ ಕಾರುಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ಶೇಖರಣಾ ವಾಹನಗಳು 2005 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು ಟಾಟಾ ಇಂಡಿಕಾ/ಇಂಡಿಗೋ/ವಿಸ್ತಾ ಕಾರುಗಳು ಹಳದಿ ಬೋರ್ಡ್ ಹೊಂದಿದ್ದು 2008 ರ ಅಥವಾ ನಂತರದ ಮಾಡೆಲ್ ಆಗಿರಬೇಕು. ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
6. ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸ್‌ಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು.
7. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
8. ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
9. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
10. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ವೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
11. ಕ್ರಮ ಸಂಖ್ಯೆ 27 ಮತ್ತು 28 ಕ್ಕೆ ರ ಹುಲ್ಲಿನ ಬೀಜ, ಪಶುಆಹಾರ ಸರಬರಾಜು ವಾಹನಕ್ಕೆ ಟೆಂಡರ್ ಹಾಕುವವರು 2005 ರ ಅಥವಾ ನಂತರದ ಮಾದರಿಯ 1.5 ಟನ್ ಸಾಮರ್ಥ್ಯದ ವಾಹನ ಹೊಂದಿದ್ದು, ಹುಲ್ಲಿನ ಬೀಜ ಮೇವು ಉಗ್ರಾಣ ಸಾಮಾಗ್ರಿಗಳು ದಾವಣಗೆರೆ ಡೈರಿ/ಚಿತ್ರದುರ್ಗ ಉಗ್ರಾಣದಿಂದ ಪಡೆದು ಸೂಚಿಸಿದ ಸ್ಥಳಕ್ಕೆ ಸಾಗಿಸುವುದು. ಲೋಡಿಂಗ್/ಅನ್‌ಲೋಡಿಂಗ್ ವೆಚ್ಚ ಸೇರಿಸಿ ದರ ನಮೂದಿಸುವುದು. ಯಾವುದಾದರೂ ಹಾಲು ಸಾಗಾಣಿಕೆ ವಾಹನದ ದಾಖಲಾತಿಗಳನ್ನು ನೀಡಬಹುದು.
12. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 16.12.2015
ಸ್ಥಳ : ಮಾಚೇನಹಳ್ಳಿ